**ಕರ್ನಾಟಕ ವಿಧಾನ ಪರಿಷತ್ತು**

**159ನೇ ಅಧಿವೇಶನ**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 346 (433) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಪ್ರಮುಖ ಕಾರಿಡಾರ್‌ಗಳಾದ ನೈಸ್ ರಸ್ತೆ, ಎಲೆಕ್ಟ್ರಾನಿಕ್ ಸಿಟಿ ಎಕ್ಸ್‌ಪ್ರೆಸ್‌ವೇ ಮತ್ತು ಅತ್ತಿಬೆಲೆ ಟೋಲ್ ಪ್ಲಾಜಾಗಳಲ್ಲಿ ಇತ್ತೀಚಿಗೆ ಶೇಕಡ 10 ರಿಂದ 13 ರಷ್ಟು ಟೋಲ್ ದರವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನೈಸ್ ರಸ್ತೆ ಟೋಲ್ ಪರಿಷ್ಕರಣೆಗೆ ಸಂಬಂಧಿಸಿದಂತೆ ದಿನಾಂಕ:04.09.2000 ರಂದು Toll Concession Agreement ಮಾಡಿಕೊಳ್ಳಲಾಗಿರುತ್ತದೆ. Toll Concession Agreement ನ ಆರ್ಟಿಕಲ್ 3.5 ರನ್ವಯ ಟೋಲ್ ದರಗಳನ್ನು ರಿಯಾಯಿತಿ ಅವಧಿಯುದ್ದಕ್ಕೂ (Concession Period) ಹಿಂದಿನ ವರ್ಷ ಚಾಲ್ತಿಯಲ್ಲಿದ್ದ ದರಕ್ಕಿಂತ ಶೇ.10 ರಷ್ಟು ಪರಿಷ್ಕರಣೆ ಮಾಡಲು ಅವಕಾಶವಿರುತ್ತದೆ. |
| ಆ) | ಈಗಾಗಲೇ ಪೆಟ್ರೋಲ್ ಡೀಸೆಲ್ ಮತ್ತು ಗ್ಯಾಸ್ ಬೆಲೆ ಏರಿಕೆಯಿಂದ ತತ್ತರಿಸಿರುವ ವಾಹನ ಸವಾರರಿಗೆ ಜುಲೈ ಒಂದರಿಂದಲೇ ಅನ್ವಯವಾಗುವಂತೆ ಬೈಕ್ ಸೇರಿದಂತೆ ವಿವಿಧ ಮಾದರಿಯ ವಾಹನಗಳ ಮೇಲಿನ ಈ ಟೋಲ್ ದರ ಹೆಚ್ಚಳವು ಗಾಯದ ಮೇಲೆ ಬರೆ ಎಳೆದಂತಾಗಿರುವುದು ನಿಜವೇ; | ಬೆಂಗಳೂರು – ಮೈಸೂರು ಮೂಲ ಸೌಕರ್ಯ ಕಾರಿಡಾರ್ ಯೋಜನೆಯ ಅನುಷ್ಠಾನ ಕುರಿತು ದಿನಾಂಕ:11.04.2025 ರಂದು ನಡೆದ ಸಚಿವ ಸಂಪುಟದ ತೀರ್ಮಾನದಂತೆ ಯೋಜನೆಯ ಕುರಿತು ಇದುವರೆಗೂ ಆಗಿರುವ ಪ್ರಗತಿಯ ಹಿನ್ನೆಲೆಯಲ್ಲಿ ಹಾಗೂ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಪರಾಮರ್ಶಿಸಿ, ಸೂಕ್ತ ಶಿಫಾರಸ್ಸು ಮಾಡಲು ಸಚಿವ ಸಂಪುಟ ಉಪ ಸಮಿತಿಯನ್ನು ದಿನಾಂಕ:16.04.2025 ರಂದು ರಚನೆ ಮಾಡಲಾಗಿರುತ್ತದೆ. ಸದರಿ ಸಚಿವ ಸಂಪುಟ ಉಪ ಸಮಿತಿಗೆ Terms of reference |
| ಇ) | ಖಾಸಗಿ ಟೋಲ್ ನಿರ್ವಹಣಾ ಸಂಸ್ಥೆಗಳು (NICE, BETL) ರಸ್ತೆ ನಿರ್ವಹಣಾ ವೆಚ್ಚದ ನೆಪವೊಡ್ಡಿ ಮನ ಬಂದಂತೆ ದರ ಹೆಚ್ಚಳ ಮಾಡುತ್ತಿದ್ದರೂ ಸರ್ಕಾರ ಇವುಗಳ ಮೇಲೆ ಯಾವುದೇ ನಿಯಂತ್ರಣ ಹೊಂದಿಲ್ಲದಿರಲು ಕಾರಣಗಳೇನು; | ವಹಿಸಲಾಗಿರುತ್ತದೆ. ಈ ಸಂಬಂಧ ಇದುವರೆಗೂ ಸಚಿವ ಸಂಪುಟ ಉಪ ಸಮಿತಿಯ 7 ಸಭೆಗಳು ನಡೆದಿದ್ದು, ಅಂತಿಮ ನಿರ್ಧಾರ ಆಗಿರುವುದಿಲ್ಲ. ಪ್ರಸ್ತುತ ಸಚಿವ ಸಂಪುಟ ಸಮಿತಿಯನ್ನು ದಿನಾಂಕ:04.07.2026 ರಂದು ಪುನರ್ ರಚಿಸಲಾಗಿರುತ್ತದೆ. ಸಚಿವ ಸಂಪುಟ ಉಪ ಸಮಿತಿಗೆ ವಹಿಸಿರುವ ವಿಷಯಗಳು (TOR) ಸಚಿವ ಸಂಪುಟ ಉಪ ಸಮಿತಿಯ ಪರಿಶೀಲನೆಯಲ್ಲಿರುತ್ತದೆ. |
| ಈ) | ಸಾರ್ವಜನಿಕರ ಹಿತದೃಷ್ಟಿಯಿಂದ 2027ರ ಜೂನ್ 30ರವರೆಗೆ ಅನ್ವಯವಾಗುವಂತೆ ಹೆಚ್ಚಿಸಲಾಗಿರುವ ಈ ಪರಿಷ್ಕೃತ ಟೋಲ್ ದರಗಳನ್ನು ತಕ್ಷಣವೇ ಪಡೆಯಲು ಅಥವಾ ಕಡಿತಗೊಳಿಸಲು ಸರ್ಕಾರ ಸಂಬಂಧಪಟ್ಟ ಸಂಸ್ಥೆಗೆ ಸೂಕ್ತ ನಿರ್ದೇಶನ ನೀಡುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು? | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುವಂತೆ, ರಾಷ್ಟ್ರೀಯ ಹೆದ್ದಾರಿ 44ರ ಸಿಲ್ಕ್ ಬೋರ್ಡ್ ಜಂಕ್ಷನ್ ನಿಂದ ಅತ್ತಿಬೆಲೆ ವರೆಗಿನ ರಸ್ತೆ ಕಾಮಗಾರಿಯನ್ನು ಮೆ. ಬಿ.ಇ.ಟಿ.ಪಿ.ಎಲ್ ರವರಿಗೆ BOT ಆಧಾರದ ಮೇಲೆ ಗುತ್ತಿಗೆ ವಹಿಸಲಾಗಿದ್ದು, ಪ್ರಸ್ತುತ ಸದರಿ ರಸ್ತೆ (ಕಾರ್ಯಾಚರಣೆ ಮತ್ತು ನಿರ್ವಹಣೆ (Operation & Maintenance (O&M)) ಅವಧಿಯಲ್ಲಿರುತ್ತದೆ. ದಿ.24.12.2009ರ ಗೆಜೆಟ್ ಅಧಿಸೂಚನೆ ಹಾಗೂ BOT ಯೋಜನೆಯನ್ವಯ ಟೋಲ್ ಶುಲ್ಕವನ್ನು ಸಂಗ್ರಹಿಸಲಾಗುತ್ತಿದ್ದು, ಟೋಲ್ ದರಗಳನ್ನು ವಾರ್ಷಿಕವಾಗಿ ರಾಷ್ಟ್ರೀಯ ಹೆದ್ದಾರಿ ಶುಲ್ಕ (Determination of Rates and |

| | | |
|---|---|---|
| | | Collection) 1997 ಹಾಗೂ ಟೋಲ್ ಗೆಜೆಟ್ ಅಧಿಸೂಚನೆ ಎಸ್.ಓ. 3288 (ಇ) ದಿನಾಂಕ 24-12-2009ರ ಪ್ರಕಾರ ಪರಿಷ್ಕರಿಸಲಾಗುತ್ತಿದೆ.<br><br>ಮೇಲ್ಕಂಡ ನಿಯಮಗಳು ಹಾಗೂ ಗೆಜೆಟ್ ಅಧಿಸೂಚನೆಯನ್ವಯ ವಾರ್ಷಿಕ ಟೋಲ್ ದರ ಪರಿಷ್ಕರಣೆಯನ್ನು Wholesale Price Index (WPI) ದರಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಟೋಲ್ ದರ ಹೆಚ್ಚಳಕ್ಕೆ ಪ್ರತೀ ವರ್ಷವೂ ನಿಗದಿತ ಶೇಕಡಾವಾರು ಪ್ರಮಾಣ ಇರುವುದಿಲ್ಲ. WPI ದರಗಳು ಪ್ರತೀ ವರ್ಷ ಜುಲೈ ತಿಂಗಳಲ್ಲಿ ಜಾರಿಗೆ ಬರುತ್ತಿದ್ದು, 2026-27ನೇ ಸಾಲಿನ ಪರಿಷ್ಕೃತ ಟೋಲ್ ದರಗಳು ದಿನಾಂಕ 01-07-2026ರಿಂದ ಜಾರಿಗೆ ಬಂದಿರುತ್ತದೆ.<br><br>ಇದಲ್ಲದೇ ಟೋಲ್ ಶುಲ್ಕ ಪಾವತಿಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಟೋಲ್ ಪಾಸ್‌ಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಸದರಿ ಪಾಸ್ ವ್ಯವಸ್ಥೆಯು ದಿನಾಂಕ: 15.08.2025 ರಿಂದ ಜಾರಿಗೆ ಬಂದಿರುತ್ತದೆ. 2026-27ನೇ ಸಾಲಿನ ಆರ್ಥಿಕ ವರ್ಷಕ್ಕೆ ಒಂದು ವರ್ಷದ ಅವಧಿಗೆ ಅಥವಾ 200 ಬಾರಿ ಟೋಲ್ ರಸ್ತೆಯಲ್ಲಿ ಸಂಚರಿಸಲು ಅನ್ವಯವಾಗುವಂತೆ ರೂ.3075/-ಗಳ ಪಾಸ್ ದರವನ್ನು ನಿಗದಿಪಡಿಸಲಾಗಿರುತ್ತದೆ.<br><br>ಟೋಲ್ ದರ ನಿಗದಿಕರಣ ಹಾಗೂ ಪರಿಷ್ಕರಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಹೊರಡಿಸಿರುವ ನಿಯಮಗಳು ಮತ್ತು ಅಧಿಸೂಚನೆಗಳು ಅನ್ವಯವಾಗುತ್ತವೆ. ಈ ವಿಷಯವು ರಾಜ್ಯ ಸರ್ಕಾರದ ವ್ಯಾಪ್ತಿಗೆ ಒಳಪಡುವುದಿಲ್ಲ.<br><br>**NH-44** ರ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಅತ್ತಿಬೆಲೆವರೆಗಿನ ರಸ್ತೆ ವಿಭಾಗವು ಪ್ರಸ್ತುತ BOT ರಿಯಾಯಿತಿ ಪಡೆದ ಸಂಸ್ಥೆಯಾದ (Concessionaire) BETPL ನ ನಿರ್ವಹಣೆ ಮತ್ತು ಕಾರ್ಯಾಚರಣೆ (O&M) ಹಂತದಲ್ಲಿದೆ. ದಿನಾಂಕ:24.12.2009 ರ ಟೋಲ್ ಗೆಜೆಟ್ ಅಧಿಸೂಚನೆಯ ಪ್ರಕಾರ, ರಿಯಾಯಿತಿ ಅವಧಿಯವರೆಗೆ ಟೋಲ್ ಶುಲ್ಕವನ್ನು ಸಂಗ್ರಹಿಸಲು **BOT** ಸಂಸ್ಥೆಗೆ ಅಧಿಕಾರವಿದೆ ಮತ್ತು ಈ ದರಗಳನ್ನು ವಾರ್ಷಿಕವಾಗಿ ಪರಿಷ್ಕರಿಸಬೇಕಾಗುತ್ತದೆ.<br><br>NH-44 ರಲ್ಲಿರುವ ಅತ್ತಿಬೆಲೆ ಮತ್ತು ಎಲೆಕ್ಟ್ರಾನಿಕ್ ಸಿಟಿ ಟೋಲ್ ಪ್ಲಾಜಾಗಳಲ್ಲಿನ ಬಳಕೆದಾರರ ಶುಲ್ಕದ ದರಗಳ ವಾರ್ಷಿಕ ಪರಿಷ್ಕರಣೆಯು 'ರಾಷ್ಟ್ರೀಯ ಹೆದ್ದಾರಿಗಳ ನಿಯಮಗಳು, 1997' (ರಾಷ್ಟ್ರೀಯ ಹೆದ್ದಾರಿಗಳ ವಿಭಾಗ/ಶಾಶ್ವತ ಸೇತುವೆ/ತಾತ್ಕಾಲಿಕ ಸೇತುವೆಯ ಬಳಕೆಗೆ ಶುಲ್ಕ ಸಂಗ್ರಹಣೆ) ಮತ್ತು ದಿನಾಂಕ:24.12.2009 ರ ಗೆಜೆಟ್ ಅಧಿಸೂಚನೆ S.O. 3288(E) ರ ಅಡಿಯಲ್ಲಿ ನಿರ್ವಹಿಸಲ್ಪಡುತ್ತದೆ.<br><br>ಮೇಲ್ಕಂಡ ಶುಲ್ಕ ನಿಯಮಗಳು ಮತ್ತು ಗೆಜೆಟ್ ಅಧಿಸೂಚನೆಯ ನಿಬಂಧನೆಗಳ ಪ್ರಕಾರ, ಸಗಟು ಬೆಲೆ ಸೂಚ್ಯಂಕದ (WPI) ಆಧಾರದ ಮೇಲೆ ಬಳಕೆದಾರರ ಶುಲ್ಕದ ದರಗಳನ್ನು ವಾರ್ಷಿಕವಾಗಿ ಪರಿಷ್ಕರಿಸಲಾಗುತ್ತದೆ ಮತ್ತು ಪರಿಷ್ಕೃತ ದರಗಳು ಪ್ರತಿ ವರ್ಷ ಜುಲೈ-1 ರಿಂದ ಜಾರಿಗೆ ಬರುತ್ತವೆ. ಅದರಂತೆ, 2026-27 ನೇ ಸಾಲಿನ ವಾಡಿಕೆಯ ವಾರ್ಷಿಕ ಪರಿಷ್ಕರಣೆಯನ್ನು ಅನ್ವಯವಾಗುವ ನಿಬಂಧನೆಗಳಿಗೆ ಅನುಗುಣವಾಗಿ ಕಟ್ಟುನಿಟ್ಟಾಗಿ ನಡೆಸಲಾಗಿದ್ದು, ಇದು ದಿನಾಂಕ:01.07.2026 ರಿಂದ ಜಾರಿಗೆ ಬರುತ್ತದೆ. WPI |

| | | |
|---|---|---|
| | | ಲೆಕ್ಕಾಚಾರಗಳ ಆಧಾರದ ಮೇಲೆ ಶುಲ್ಕದ ದರಗಳನ್ನು ಪರಿಷ್ಕರಿಸಲಾಗಿದ್ದು, ಇದರಲ್ಲಿ ಯಾವುದೇ ನಿಗದಿತ ಶೇಕಡಾವಾರು ಹೆಚ್ಚಳದ ಮಿತಿ ಇರುವುದಿಲ್ಲ.<br><br>ಇದಲ್ಲದೆ, ರಸ್ತೆಯನ್ನು ಆಗಾಗ್ಗೆ ಬಳಸುವವರಿಗೆ ಹೆಚ್ಚಿನ ಅನುಕೂಲ ಮತ್ತು ವೆಚ್ಚ-ಪರಿಣಾಮಕಾರಿತ್ವವನ್ನು ಒದಗಿಸುವ ಉದ್ದೇಶದಿಂದ, NHAI ದಿನಾಂಕ:15.08.2025 ರಿಂದ 'ವಾರ್ಷಿಕ ಪಾಸ್' (Annual Pass) ಸೌಲಭ್ಯವನ್ನು ಪರಿಚಯಿಸಿದೆ. 2026-27 ನೇ ಆರ್ಥಿಕ ವರ್ಷಕ್ಕೆ, ಈ ವಾರ್ಷಿಕ ಪಾಸ್ ರೂ. 3,075/- ವೆಚ್ಚದಲ್ಲಿ ಲಭ್ಯವಿರುತ್ತದೆ ಮತ್ತು ಇದು ಒಂದು ವರ್ಷದವರೆಗೆ ಅಥವಾ ಟೋಲ್ ಪ್ಲಾಜಾಗಳಲ್ಲಿ 200 ಬಾರಿ ಹಾದುಹೋಗುವವರೆಗೆ (ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ) ಮಾನ್ಯವಾಗಿರುತ್ತದೆ.<br><br>ಟೋಲ್ ಶುಲ್ಕದ ದರಗಳು ಭಾರತ ಸರ್ಕಾರದ NH ಶುಲ್ಕ ನಿಯಮಗಳಿಗೆ ಒಳಪಟ್ಟಿರುತ್ತವೆ. ಸದರಿ ವಿಷಯದಲ್ಲಿ ರಾಜ್ಯ ಸರ್ಕಾರದ ಪಾತ್ರವಿರುವುದಿಲ್ಲ. |

ಸಂಖ್ಯೆ:ಲೋಇ 588 ಸಿಆರ್‌ಎಂ 2026

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು